**ಕರ್ನಾಟಕ ಸರ್ಕಾರ**

ಸಂಖ್ಯೆ: TOR/134/TDO/2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ:30-11-2022.

**ಸುತ್ತೋಲೆ**

C&I/E 508916/TS/2022
01/12/2022

**ವಿಷಯ:** ಭಾರತದಲ್ಲಿ ನಡೆಯುವ ಜಿ-20 ರಾಷ್ಟ್ರಗಳ ಸಭೆಯ ಲೋಗೋ ಮತ್ತು ಥೀಮ್‌ಗಳಿಗೆ ವ್ಯಾಪಕ ಪ್ರಚಾರ ನೀಡುವ ಬಗ್ಗೆ.

**ಉಲ್ಲೇಖ:** ಸಂಪುಟ ಕಾರ್ಯದರ್ಶಿ, ಭಾರತ ಸರ್ಕಾರ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:1/48/8/2022-CAB:ದಿನಾಂಕ:08.11.2022.

*****

G-20 ರಾಷ್ಟ್ರಗಳ ಸಭೆಯು ಡಿಸೆಂಬರ್, 2022 ರಿಂದ ನವೆಂಬರ್, 2023 ರವರೆಗೆ ಭಾರತದಲ್ಲಿ ನಡೆಯಲಿದ್ದು, ಸದರಿ ಸಭೆಗೆ ಸಂಬಂಧಿಸಿದಂತೆ ಮಾನ್ಯ ಪ್ರಧಾನ ಮಂತ್ರಿಗಳು G-20 ಲೋಗೊವನ್ನು ಮತ್ತು ಥೀಮ್ ಅನ್ನು ಅನಾವರಣಗೊಳಿಸಿರುತ್ತಾರೆ. ಸಂಪುಟ ಕಾರ್ಯದರ್ಶಿ, ಭಾರತ ಸರ್ಕಾರರವರ ಉಲ್ಲೇಖಿತ ಅರೆ ಸರ್ಕಾರಿ ಪತ್ರದ ಸೂಚನೆಯಂತೆ, ಭಾರತದ ಅಧ್ಯಕ್ಷೀಯ ಅವಧಿಯಲ್ಲಿ ಇದರೊಂದಿಗೆ ಲಗತ್ತಿಸಿರುವ ಲೋಗೋ ಮತ್ತು ಥೀಮ್ ಅನ್ನು G-20 ಸರ್ಕಾರದ ಎಲ್ಲಾ ಇಲಾಖೆಗಳು/ ನಿಗಮಗಳು/ ಮಂಡಳಿಗಳು/ ಪ್ರಾಧಿಕಾರಗಳು/ ಸ್ವಾಯತ್ತ ಸಂಸ್ಥೆಗಳು ವ್ಯಾಪಕವಾಗಿ ಈ ಕೆಳಕಂಡಂತೆ ಬಳಸಿಕೊಳ್ಳಲು ಹಾಗೂ G-20 ಲೋಗೋ ಮತ್ತು ಥೀಮ್ ಅನ್ನು ಪ್ರಚಾರ ಮಾಡಲು ಅವಕಾಶವಿರುವ ಎಲ್ಲಾ ಸಂದರ್ಭಗಳಲ್ಲಿ ಬಳಸುವಂತೆ ಸೂಚಿಸಿದೆ:-

- ವಾರ್ಷಿಕ ವರದಿಗಳು, ಅಧ್ಯಯನ ಪತ್ರಿಕೆಗಳು, ಬಜೆಟ್ ದಾಖಲೆಗಳು, ನಿಯತಕಾಲಿಕಗಳು ಮತ್ತು ಮ್ಯಾಗಜಿನ್‌ಗಳಂತಹ ಎಲ್ಲಾ ಪ್ರಕಟಣೆಗಳಲ್ಲಿ ಬಳಸುವುದು.
- ರಾಜ್ಯ ಸರ್ಕಾರ ಮತ್ತು ಅದರ ಸ್ವಾಯತ್ತ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ಯಮ ವಲಯಗಳ ವೆಬ್‌ಸೈಟ್‌ಗಳಲ್ಲಿ ಬಳಸುವುದು.
- ಫೈಲ್ ಕವರ್‌ಗಳು, ಫೋಲ್ಡರ್‌ಗಳು, ನೋಟ್ ಪ್ಯಾಡ್‌ಗಳು, ಡೈರಿಗಳು, ಕ್ಯಾಲೆಂಡರ್‌ಗಳು, ವಿಸಿಟಿಂಗ್ ಕಾರ್ಡ್‌ಗಳು ಹಾಗೂ ಮುಂತಾದವುಗಳ ಮೇಲೆ ಬಳಸುವುದು.
- ರಾಜ್ಯ ಸರ್ಕಾರವು ಭಾಗವಹಿಸಬಹುದಾದ ರಾಷ್ಟ್ರೀಯ/ ಅಂತರರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಸಹ-ಬ್ರಾಂಡಿಂಗ್ ಗಾಗಿ ಬಳಸುವುದು.
- ಸಾಮಾಜಿಕ ಮಾಧ್ಯಮಗಳು, ಡಿಜಿಟಲ್ ಮೀಡಿಯಾಗಳು.
- ಅಧ್ಯಕ್ಷೀಯ ವರ್ಷದಲ್ಲಿ ಯಾವುದೇ ಉತ್ಸವಗಳು, ಸೆಮಿನಾರ್‌ಗಳು ಮತ್ತು ಕಾರ್ಯಾಗಾರಗಳನ್ನು ಮಧ್ಯಸ್ಥಗಾರರಿಂದ ಆಯೋಜಿಸಲಾಗಿದ್ದರೆ ಅಂತಹವುಗಳ ಮೇಲೆ ಬಳಸುವುದು.
- ಹೊರಾಂಗಣ ಪ್ರಚಾರ, ಕಚೇರಿ ಕಟ್ಟಡಗಳ ಮೇಲೆ ಹೋರ್ಡಿಂಗ್‌ಗಳು ಮತ್ತು ಡಿಜಿಟಲ್ ಪರದೆಯನ್ನು ಅಳವಡಿಸುವ ಮೂಲಕ ಬಳಸುವುದು.
- ಡಿಜಿಟಲ್, ಪ್ರಿಂಟ್, ದೃಶ್ಯ/ಶ್ರಾವ್ಯ ಗಳಲ್ಲಿ, ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಸರ್ಕಾರಿ ಚಿಹ್ನೆಗಳು ಮತ್ತು ಪ್ರಚಾರ/ ಪ್ರಚಾರದ ವಸ್ತುಗಳ ಮೇಲೆ ಬಳಸುವುದು.

- ಲೋಗೋ ಮತ್ತು ಥೀಮ್‌ನ ಬಳಕೆಯನ್ನು ರಾಜ್ಯ ಸರ್ಕಾರದ ಖಾಸಗಿ ಪಾಲುದಾರರ ನಡುವೆಯೂ ಪ್ರಚಾರ ಮಾಡಲು ಬಳಸುವುದು. ಉದಾ: ಹೋಟೇಲ್ ಗಳ, ಖಾಸಗಿ ಸಾರಿಗೆ ಏಜೆನ್ಸಿಗಳ websiteನಲ್ಲಿ ಬಳಸುವುದು.
- ದೇಶದಾದ್ಯಂತ ಇರುವ ಸರ್ಕಾರಿ ಸ್ವಾಮ್ಯದ ಪೆಟ್ರೋಲ್ ಪಂಪ್‌ಗಳು G-20 ಲೋಗೋ ಮತ್ತು ಥೀಮ್ ಅನ್ನು ಸಹ ಪ್ರಮುಖವಾಗಿ ಪ್ರದರ್ಶಿಸುವುದು.
- G-20 ಲೋಗೋ ಮತ್ತು ಥೀಮ್ ಅನ್ನು ಸರ್ಕಾರವು ಸಹ-ಪ್ರಾಯೋಜಕರಾಗಿರುವ ಅಥವಾ ಸರ್ಕಾರಿ ಪಾಲುದಾರರು ಆಯೋಜಿಸುವ ಯಾವುದೇ ಕಲೆ / ಕರಕುಶಲ / ಸಾಂಸ್ಕೃತಿಕ ಉತ್ಸವಗಳು ಮತ್ತು ಕಾರ್ಯಕ್ರಮಗಳಲ್ಲಿ ಬಳಸುವುದು.

**(ವಂದಿತಾ ಶರ್ಮಾ)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ,**

1. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಗಳು
2. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು
3. ಎಲ್ಲಾ ಜಿಲ್ಲೆಯ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
5. ಎಲ್ಲಾ ನಿಗಮ/ಮಂಡಳಿ/ಪ್ರಾಧಿಕಾರಗಳು/ಸ್ವಾಯತ್ತ ಸಂಸ್ಥೆಗಳು/ಸಾರ್ವಜನಿಕ ಉದ್ದಿಮೆಗಳ ಮುಖ್ಯಸ್ಥರು
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

ಮೆಮೋ: ಸೆಸ್ಕ್/ಪ್ರ.ವ್ಯ(ತಾಂ)/08 /F-64/2022-23/ CYS-1339 ದಿನಾಂಕ: 05 DEC 2022

ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಮುಖ್ಯ ಆರ್ಥಿಕ ಅಧಿಕಾರಿಗಳು, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
2. ಮುಖ್ಯ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವಲಯ, ಚಾ.ವಿ.ಸ.ನಿ.ನಿ., ಮೈಸೂರು/ಹಾಸನ.
3. ಮುಖ್ಯ ಪ್ರಧಾನ ವ್ಯವಸ್ಥಾಪಕರು, (ಆಂ.ಪ), ನಿಗಮಕಛೇರಿ, ಚಾವಿಸನಿನಿ, ಮೈಸೂರು.
4. ನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನಾ ವಲಯ, ಚಾ.ವಿ.ಸ.ನಿ.ನಿ., ಮೈಸೂರು/ಹಾಸನ.
5. ಪ್ರಧಾನ ವ್ಯವಸ್ಥಾಪಕರು ಲೆಕ್ಕ&ಕಂದಾಯ/ ಹಣಕಾಸು/ಆಂ ಮತ್ತು ಮಾ.ಸಂ/ವಾಣಿಜ್ಯ./ಯೋಜನೆ/ಖರೀದಿ /ತಾಂತ್ರಿಕ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನಾ ವೃತ್ತ,
7. ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು.
8. ಉಪ ಪ್ರಧಾನ ವ್ಯವಸ್ಥಾಪಕರು,(ಎಂ.ಐ.ಎಸ್)ನಿಗಮ ಕಛೇರಿ, ಚಾವಿಸನಿನಿ, ಮೈಸೂರು ನಿಗಮದ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
9. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನಾ ವಿಭಾಗ,
10. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಾಪಕ ಪರೀಕ್ಷಾ ವಿಭಾಗ/ ಜಾಗೃತದಳ/ ಚಾವಿಸನಿನಿ, ಮೈಸೂರು.
11. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ, ಚಾವಿಸನಿನಿ.
12. ಆಪ್ತ ಸಹಾಯಕರು ವ್ಯವಸ್ಥಾಪಕ ನಿರ್ದೇಶಕರು/ ತಾಂತ್ರಿಕ ಸಹಾಯಕರು ನಿರ್ದೇಶಕರು(ತಾಂತ್ರಿಕ)ಇವರ ಗಮನಕ್ಕೆ ಹಾಗೂ ವಿಷಯವನ್ನು ವ್ಯ.ನಿ/ ನಿ.(.ತಾ) ರವರ ಗಮನಕ್ಕೆ ತರಲು ಸಲ್ಲಿಸಿದೆ.

ಮುಖ್ಯ ಕಡತ/ಕ.ಪ್ರ.

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ),
ಚಾವಿಸನಿನಿ, ಮೈಸೂರು.